# IN THE COURT OF THE ADDL. SENIOR CIVIL JUDGE & JMFC., GUBBI

## OS – 60/2020

Witness present and duly sworn on : 05.09.2023

Cross Examination: by Counsel for Defendants :

ನಾನು ಡಿಗ್ರಿ ಓದಿದ್ದೇನೆ. ನನಗೆ ಈಗ 38 ವರ್ಷ ವಯಸ್ಸಾಗಿರುತ್ತದೆ. ನಾನು ದಾಬಸ್ಪೇಟೆಯ ಕಂಪನಿಯಲ್ಲಿ HR ಆಗಿ ಕೆಲಸ ಮಾಡುತ್ತಿದ್ದೇನೆ. ಈ ಕೇಸಿನ ವಾದಿ ಮತ್ತು ಪ್ರತಿವಾದಿಗಳು ನಮ್ಮ ಊರಿನವರಾದ ಕಾರಣ ನನಗೆ ಅವರ ಪರಿಚಯ ಇದೆ. 3 ನೇ ಪ್ರತಿವಾದಿ ಈಗ ಯಾವ ಊರಿನಲ್ಲಿ ಎಷ್ಟನೇ ತರಗತಿ ಓದುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ವಾದಿ, ಪ್ರತಿವಾದಿ ಮತ್ತು ನಾನು ಬೇರೆ ಬೇರೆ ಜನಾಂಗಕ್ಕೆ ಸೇರಿದ್ದೇವೆ ಎಂದರೆ ಸರಿ. ನಮ್ಮ ಗ್ರಾಮದಲ್ಲಿ ಸುಮಾರು 250 ಮನೆಗಳಿವೆ ಎಂದರೆ ಸರಿ. ನೆಲಮಂಗಲ, ಮಲ್ಲರ ಬಾಣವಾಡಿ ಒಂದಕ್ಕೊಂದು ಲಗತ್ತಾಗಿದೆ ಎಂದರೆ ಸುಮಾರು 4-5 ಕೀ ಮೀ ದೂರದಲ್ಲಿ ಇದೆ. 1 ನೇ ಪ್ರತಿವಾದಿಯ ಮೊದಲನೇ ಹೆಂಡತಿ ಸುಜಾತ ಅಂದರೆ ವಾದಿಯ ತಾಯಿ ಯಾವಾಗ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ವಾದಿ ನರಸಿಂಹಸ್ವಾಮಿಯವರು 23.02.2022 ರಲ್ಲಿ ಮರಣ ಹೊಂದಿರುತ್ತಾರೆ. ಅವರು ರೈಲ್ವೆ ಹಳಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ರೈಲ್ವೆ ಹಳಿಯಲ್ಲಿ ಮರಣ ಹೊಂದಿರುತ್ತಾರೆ ಎಂದು ಊರಿನವರು ಹೇಳಿದ ನಂತರ ನನಗೆ ಗೊತ್ತಾಯಿತು. ನನ್ನ ಸಾಕ್ಷಿ ಪ್ರಮಾಣ ಪತ್ರದ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಬೇರೆ ಮದುವೆ ಯಾವಾಗ ಮತ್ತು ಎಲ್ಲಿ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ಊರಿಗೆ ಬಂದ ನಂತರ ಸದರಿ ವಿಚಾರ ಗೊತ್ತಾಗಿರುತ್ತದೆ. ಅವರ ಕುಟುಂಬಕ್ಕೆ ಆಸ್ತಿಗಳು ಯಾವ ರೀತಿಯಲ್ಲಿ ಬಂದಿರುತ್ತದೆ ಎಂದರೆ ತೋಟ, ಮನೆ ಮತ್ತು ಧನ ಶೆಡ್ ಸುಜಾತರವರಿಗೆ ಅವರ ತಂದೆಯಿಂದ ಬಂದಿರುತ್ತದೆ. ಸುಜಾತರವರ ತಂದೆಯ ಹೆಸರು ರಾಮಚಂದ್ರಪ್ಪ. ಸದರಿ ರಾಮಚಂದ್ರಪ್ಪರವರಿಗೆ 2 ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ನಮ್ಮ ಊರಿನಲ್ಲಿದ್ದಾರೆ ಇನ್ನುಳಿದ ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ. ರಾಮಚಂದ್ರಪ್ಪನವರ ಕುಟುಂಬದ ಸದಸ್ಯರ ಮಾಹಿತಿ ಮತ್ತು ಅವರ ಕುಟುಂಬದ ಜಮೀನುಗಳ ಮಾಹಿತಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಅವರ ಜೀವಿತ ಕಾಲದಲ್ಲಿ TAPCMS ಸೊಸೈಟಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಅವರು ಸುಮಾರು 40-45 ವರ್ಷಗಳು ಕಾರ್ಯದರ್ಶಿಯಾಗಿ ಕೆಲಸ ಮಾಡಿದರು ಎಂದರೆ ಸರಿ. ಅವರಿಗೆ ಬಂದ ವೇತನದಿಂದ ಆಸ್ತಿಗಳನ್ನು ಖರೀದಿ ಮಾಡಿ ಅವರ ಹೆಂಡತಿಯ ಹೆಸರಿಗೆ ನೊಂದಣಿ ಮಾಡಿಸಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ಮೃತ ವಾದಿ ಬಾಲಸ್ನೆಹೀತರು ಎಂದರೆ ನಾವಿಬ್ಬರು ಸ್ನೆಹೀತರು. ಈ ದಾವೆಯಲ್ಲಿ ಆಗಿರುವ ವಿಚಾರಣೆಯ ವಿವರಗಳು ನನಗೆ ಗೊತ್ತಿರುತ್ತದೆ. ವಾದಿ ನರಸಿಂಹಸ್ವಾಮಿರವರು ಈ ನ್ಯಾಯಾಲಯದಿಂದ ಆಸ್ತಿಗಳನ್ನು ಮಾರಾಟ ಮಾಡಬಾರದೆಂದು ಆದೇಶ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಪ್ರಮಾಣ ಪತ್ರದಲ್ಲಿ ಆಸ್ತಿಗಳು ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳೆಂದು ಹೇಳಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಅವರ ಜೀವಿತ ಕಾಲದಲ್ಲಿ ವಾದಿಗೆ ಕೊಡಬೇಕಾದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದು, ಉಳಿದ ಅಸ್ತಿಗಳನ್ನು 2 ನೇ ಮತ್ತು 3 ನೇ ಪ್ರತಿವಾದಿಯ ಹೆಸರಿಗೆ ನೊಂದಾಯಿತ ದಾಖಲೆಗಳನ್ನು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ಅವರವರು ತೆಂಗು ಮತ್ತು ಅಡಿಕೆ ತೋಟದಲ್ಲಿ ಫಲವನ್ನು ತೆಗೆದುಕೊಳ್ಳು ತ್ತಿದ್ದಾರೆಂದರೆ ವಾದಿಯ ತಂದೆಯ ಜೀವಿತ ಕಾಲದಲ್ಲಿ ತೆಗೆದುಕೊಳ್ಳುತ್ತಿದ್ದರು. ವಾದಿ ಮತ್ತು ಪ್ರತಿವಾದಿಗಳು ಮಲ್ಲರಬಾಣವಾಡಿಯಲ್ಲಿ ಪ್ರತ್ಯೇಕವಾಗಿ ಬೇರೆ ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಆಸ್ತಿಗಳ ಕಂದಾಯ ಮತ್ತು ಇ-ಸ್ವತ್ತು ದಾಖಲೆಗಳು ಅವರ ಹೆಸರಿನಲ್ಲಿ ಆಗಿರುತ್ತದೆ ಎಂದರೆ 1 ನೇ ಪ್ರತಿವಾದಿಯ 2 ನೇ ಹೆಂಡತಿಯ ಹೆಸರಿನಲ್ಲಿ ಆಗಿರುತ್ತದೆ. ನನಗೆ ಸ್ವತ್ತುಗಳ ಬಗ್ಗೆ ಯಾವುದೇ ವಿಷಯ ಗೊತ್ತಿಲ್ಲದೆ ಇದ್ದರು ವಾದಿ ನನ್ನ ಸ್ನೆಹೀತನಾದ ಕಾರಣ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi